

## ದೈತ್ಯ ಅಣಬೆ ಕಂಡೀರಾ?

ಆಗ ನಾನಿನ್ನು ಚಿಕ್ಕವಳು. ಮಳೆಗಾಲದ ದಿನಗಳವು. ಆಟವಾಡಲು ಹೊರಗಡೆ ಹೋದಾಗ ಮರಗಳ ಬುಡದಲ್ಲಿ ವಿಚಿತ್ರವಾಗಿ ಏನೋ ಬೆಳೆದು ನಿಂತಿದ್ದವು. ಅವುಗಳನ್ನು ಕಂಡು ಆಶ್ಚರ್ಯವಾಯಿತು. ಅದೇನು ಅಂತ ನನ್ನ ಗೆಳತಿಯನ್ನು ಕೇಳಿದೆ. ಅದಕ್ಕವಳು 'ನಾಯಿಕೊಡೆ' ಎಂದಿದ್ದು, ಈ ಚಿತ್ರದಲ್ಲಿ ಕಾಣುತ್ತಿರುವ ಕೃತಕ ಅಣಬೆಗಳನ್ನು ಕಂಡಾಗ ನೆನಪಾಯಿತು. ಅದು ಏನೇ ಇರಲಿ. ಮಳೆಗಾಲದಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುವ ಶಿಲೀಂಧ್ರ ವರ್ಗಕ್ಕೆ ಸೇರಿದ ಒಂದು ಬಗೆಯ ಸಸ್ಯಕ್ಕೆ ಅಣಬೆ ಎಂದು ನಾನು ದೊಡ್ಡವಳಾದ ಬಳಿಕ ತಿಳಿಯಿತು.

ಅಣಬೆಗಳಲ್ಲಿ ಹಲವು ವಿಧಗಳಿವೆ. ಕೆಲವು ತಿನ್ನಲು ಯೋಗ್ಯವಾಗಿದ್ದರೆ, ಇನ್ನೂ ಕೆಲವು ವಿಷಕಾರಿ. ಆದರೆ ಈ ಛಾಯಾಚಿತ್ರದಲ್ಲಿ ಕಾಣುವ ಬೃಹತ್ತಾದ ಅಣಬೆಗಳನ್ನು ತಿನ್ನಲಾಗದು. ಇವು ಮಾನವ ನಿರ್ಮಿತವಾದ ಅಣಬೆಗಳು. ಈಚೆಗೆ ದಾವಣಗೆರೆಯ ಫೈನ್ ಆರ್ಟ್ಸ್ ಕಾಲೇಜಿನ ಆವರಣದಲ್ಲಿರುವ ಥೀಮ್ ಪಾರ್ಕ್ ನೋಡಲು ಹೋದಾಗ ಗಮನಿಸಿದೆ. ಅದುಸಿಮೆಂಟ್ ಮರಳು ಬಳಸಿ ಆಳೆತ್ತರದ ಅಣಬೆಗಳನ್ನು ನಿರ್ಮಿಸಿ ಬಿಳಿ ಬಣ್ಣದ ಲೇಪನ ಮಾಡಿದ್ದಾರೆ.

**–ಅನುರಾಧ ಟಿ.,** ದಾವಣಗೆರೆ

## ಗೆಜ್ಜೆವಸ್ತ್ರವೆಂಬ ಕಲಾಕೌತುಕ



ಗೆಜ್ಜೆವಸ್ತ್ರ ತಯಾರಿಕೆ ಒಂದು ಸೃಜನಶೀಲ ಕರಕುಶಲ ಕಲೆ. ಹತ್ತಿಯನ್ನು ನವಿರಾಗಿ ಹೊಸೆದು ಅತಿ ತೆಳುವಾದ ಎಳೆಗಳನ್ನಾಗಿಸಿ ಅದರಿಂದ ವೈವಿಧ್ಯಮಯ ಹಾರ, ಆಕೃತಿಗಳನ್ನು ರೂಪಿಸುವುದು ಮಲೆನಾಡ ಮಹಿಳೆಯರ ಸಾಂಪ್ರದಾಯಿಕ ಹವ್ಯಾಸ. ಭಕ್ತರು ದೇವರಿಗೆ ಸಲ್ಲಿಸುವ ಸೇವೆಗಳಲ್ಲಿ ಗೆಜ್ಜೆವಸ್ತ್ರಾರ್ಪಣೆ ಶ್ರೇಷ್ಠವಾದುದು ಎಂಬುದು ನಮ್ಮಲ್ಲಿನ ನಂಬುಗೆ. ಹಾಗಾಗಿ ಹಬ್ಬ, ಹರಿದಿನಗಳಲ್ಲಿ ದೇವರಿಗೆ ಗೆಜ್ಜೆವಸ್ತ್ರ ಏರಿಸಿ, ಪೂಜಿಸಿ ಕೃತಾರ್ಥರಾಗುವ ಪದ್ಧತಿ ಬೆಳೆದು ಬಂದಿದೆ. ವಿವಿಧ ಬಣ್ಣಗಳ ಸಂತದ ತಗಡು ಬಳಸಿ ಹತ್ತಿಯ ಎಳೆಗಳಿಗೆ ಕಟ್ಟು ಹಾಕಲಾಗುತ್ತದೆ.

ಮಿನುಗುವ ಕಾಗದ, ಟಿಕ್ಲಿಯಂತಹ ಆಲಂಕಾರಿಕ ವಸ್ತುಗಳನ್ನು ಬಳಸಿ ಗೆಜ್ಜೆವಸ್ತ್ರದ ಅಂದ ಹೆಚ್ಚಿಸಲಾಗುತ್ತದೆ. ವರಮಹಾಲಕ್ಷ್ಮಿಗೆ ಹನ್ನೆರಡು, ಗೌರಿಗೆ ಹದಿನಾರು, ಗಣೇಶನಿಗೆ ಇಪ್ಪತ್ತೊಂದು ಹೀಗೆ ವಿವಿಧ ಹಬ್ಬ, ವ್ರತಗಳಂದು ಇಂತಿಷ್ಟೇ ಎಳೆಗಳ ಗೆಜ್ಜೆವಸ್ತ್ರ ರಚಿಸುವುದು ಸಂಪ್ರದಾಯ. ಈಚೆಗೆ ತೀರ್ಥಹಳ್ಳಿ ಪಟ್ಟಣದ ಗಾಯತ್ರಿ ಮಂದಿರದಲ್ಲಿ ನಡೆದ ಆಕರ್ಷಕ ಗೆಜ್ಜೆವಸ್ತ್ರ ಪ್ರದರ್ಶನವು ಕಲಾಸಕ್ತರ ಮನದುಂಬಿಸುವ ಜೊತೆಗೆ ಕಲಾಕಾರರನ್ನು ಗುರುತಿಸಿ, ಪ್ರೋತ್ಸಾಹಿಸುವ ವೇದಿಕೆಯಾಗಿತ್ತು. ಪ್ರದರ್ಶನದಲ್ಲಿ ಬೆಂಗಳೂರಿನ ಕಲಾವಿದೆ ಚಿತ್ರ ದಾಮ್ಲೆ ಹತ್ತಿಯಲ್ಲಿ ಮೂಡಿಸಿದ ಮಂಟಪ, ಗಣಪತಿ, ದೀಪಸ್ತಂಭ, ಪೂಜಾ ಪರಿಕರಗಳು ರಸಿಕರ ಹೃನ್ಮನ ಸೆಳೆದು ಮೂಕವಿಸ್ಮಿತರನ್ನಾಗಿಸಿದವು. ಅಪರೂಪವಾಗುತ್ತಿರುವ ಸಾಂಪ್ರದಾಯಿಕ ಕಲಾ ಪ್ರಕಾರವೊಂದನ್ನು ಮುಂದಿನ ಪೀಳಿಗೆಗೆ ದಾಟಿಸುವ ಇಂತಹ ಕಾರ್ಯ ನಿಜಕ್ಕೂ ಶ್ಲಾಘನೀಯ.

**–ಡಾ. ಮುರಳೀಧರ ಕಿರಣಕೆರೆ,** ತೀರ್ಥಹಳ್ಳಿ



## ನವಿಲಿನಾಕೃತಿಯ ವಿಭೂತಿ ಪೆಟ್ಟಿಗೆ

ಪ್ರತಿದಿನ ಹಣೆಗೆ ವಿಭೂತಿ ಹಚ್ಚಿಕೊಳ್ಳುವ ಸಂಪ್ರದಾಯವು ಹಲವು ಜಾತಿ, ಧರ್ಮಗಳ ಜನರಲ್ಲಿದೆ. ಅಂಥವರ ಮನೆಗಳಲ್ಲಿ ವಿಭೂತಿಯನ್ನು ಹಾಕಿಡುವುದಕ್ಕೆಂದೇ ಮರದ, ಲೋಹದ ಪೆಟ್ಟಿಗೆಗಳು ಮನೆಯ ದೇವರ ಕೋಣೆಯಲ್ಲಿ ಇರುತ್ತವೆ. ಚಿತ್ರದಲ್ಲಿ ಕಾಣುತ್ತಿರುವುದು ಸಹ ನವಿಲಿನ ಆಕೃತಿಯ ವಿಭೂತಿ ಪೆಟ್ಟಿಗೆ.

ಇದು ಶಿರಸಿ ತಾಲ್ಲೂಕಿನ ಸೋಂದಾ ಸನಿಹದ ಹುಲೇಕಲ್‌ನಲ್ಲಿ ಚಿದಾನಂದ ಶೀಲವಂತ ಎಂಬುವರ ಮನೆಯಲ್ಲಿ ಕಂಡಿತು. ಇದು ಸುಮಾರು ಮುನ್ನೂರು ವರ್ಷಗಳಷ್ಟು ಹಳೆಯದು. ನವಿಲಿನ ಆಕಾರದ, ವಿಶಿಷ್ಟ ಕೆತ್ತನೆಯು ವಿಭೂತಿ ಪೆಟ್ಟಿಗೆಯ ಆಕರ್ಷಣೆ. ಮೇಲ್ನೋಟಕ್ಕೆ ಕುಸುರಿ ಕೆತ್ತನೆಯ ಸಾಮಾನ್ಯ ನವಿಲು ಇದು. ಆದರೆ, ನವಿಲಿನ ರೆಕ್ಕೆಗಳನ್ನು ಎರಡೂ ಕಡೆಗೂ ತೆರೆದಾಗಷ್ಟೇ ಒಳಗಿರುವ ವಿಭೂತಿ ಹಾಕಲು ಇರುವ ಸ್ಥಳಾವಕಾಶ ಕಾಣುತ್ತದೆ. ಹೊರಗಿನಿಂದ ನೋಡಿದಾಗ ವಿಭೂತಿ ಗೋಚರಿಸದಂತೆ ಬಡಗಿಯು ತನ್ನ ಕರಕುಶಲತೆಯನ್ನು ಇದರಲ್ಲಿ ತೋರಿಸಿದ್ದಾನೆ. ಹಿಂದಿನವರ ಕಲಾಪ್ರಜ್ಞೆ, ಬಡಗಿಗಳ ಕೌಶಲ್ಯತೆ, ತಂತ್ರಗಾರಿಕೆಗೆ ಇದು ಮಾದರಿಯಾಗಿದೆ. ಇಂತಹ ಹಳೆಯ ಕಾಲದ ಅಪರೂಪದ ಮರದ ವಸ್ತು ಜನರ ವೀಕ್ಷಣೆಗಾಗಿ ಜೋಪಾನವಾಗಿ ಕಾಯ್ದಿಡುವಂತಿದೆ.

**–ಅರ್ಚನಾ ಜಿ. ಬೊಮ್ನಳ್ಳಿ**

## ಆಕರ್ಷಕ ನೀರ ಕಲಶ



ಬೆಂಗಳೂರಿನ ಬನ್ನೇರುಘಟ್ಟ ರಸ್ತೆಯ ಕೆಸರಗುಪ್ಪೆ ಎಂಬಲ್ಲಿ ಆಶಾಪುರಾ ಮಾತಾಜೀಧಾಮ ದೇವಸ್ಥಾನಕ್ಕೆ ಕಾಲಿಟ್ಟಾಗ ಮೊದಲು ಆಕರ್ಷಿಸಿದ್ದು ದೇವಸ್ಥಾನದ ಎದುರಿಗಿದ್ದ ಕಲಶ. ದೊಡ್ಡ ಗುಡಾಣದಂತಹ ಬಂಗಾರದ ಬಣ್ಣದ ಕಲಶ ತಂಬಿಗೆಯ ಮೇಲೆ ಹಸಿರು ಮಾವಿನ ಎಲೆ, ಅದರ ಮಧ್ಯೆ ಚಿನ್ನದ ಬಣ್ಣದ ತೆಂಗಿನಕಾಯಿಯ ರಚನೆ ಇತ್ತು. ಇದಕ್ಕೆ ಸುತ್ತಲೂ ನಲ್ಲಿಗಳು ಮತ್ತು ಅದರ ಕೆಳಗೊಂದು ಲೋಟ ಇಟ್ಟದ್ದರು. ಅದನ್ನು ನೋಡಿ ಅದು ಕುಡಿಯುವ ನೀರಿನ ಟ್ಯಾಂಕ್ ಎಂದು ತಿಳಿಯಿತು. ದೇವರ ಪೂಜೆಯ ಕಲಶದ ನೀರಿನಂತೆ ಈ ಕುಡಿಯುವ ನೀರನ್ನು ವ್ಯಯವಾಗದಂತೆ ಜೋಪಾನವಾಗಿ ಬಳಸಿ ಎಂಬ ಸಂದೇಶ ಈ ಕಲಶ ಸಾರುತ್ತಿದೆ. ಇನ್ನು ಈ ದೇಗುಲವು ರಾಜಸ್ಥಾನಿ ಶೈಲಿಯಲ್ಲಿದ್ದು, ನೋಡಲು ತುಂಬ ಸುಂದರವಾಗಿದೆ.

**–ಶಾಲಿನಿ ನಾಯಕ್,** ಬೆಂಗಳೂರು